ಯಕ್ಷಗಾನ ಪ್ರಸಂಗ

ಅರುಣ ಸಾರಥ್ಯ

ಕವಿ

ಡಾ. ಅಮೃತ ಸೋಮೇಶ್ವರ

ಅಂತರಜಾಲ ಆವೃತ್ತಿ ಪ್ರಕಾಶಕರು

ಯಕ್ಷವಾಹಿನಿ®

Email: yakshaprasangakosha@gmail.com

Blog: www.yakshaprasangakosha.yakshavahini.com

ಆವೃತ್ತಿ ೧.೦ ಜೂನ್ ೧, ೨೦೨೦

ಯಕ್ಷವಾಹಿನಿ®

Email: yakshaprasangakosha@gmail.com, yakshavahini@gmail.com, Blog: www.yakshaprasangakosha.yakshavahini.com

ಯಕ್ಷವಾಹಿನಿಯ ಯಕ್ಷಪ್ರಸಂಗಕೋಶ ಯೋಜನಾ ಸಮೂಹ

ಗೌರವಾನ್ವಿತ ಸಂಪಾದಕ ಮಂಡಳಿ:

ಶ್ರೀಧರ ಡಿ. ಎಸ್. (ಗೌರವಾಧ್ಯಕ್ಷರು), ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ, ದಿನೇಶ ಉಪ್ಪೂರ, ಅಶೋಕ ಮುಂಗಳಿಮನೆ

ಗೌರವಾನ್ವಿತ ಸಲಹಾ ಮಂಡಳಿ:

ಅನಂತ ಪದ್ಮನಾಭ ಫಾಟಕ್, ಡಾ. ಪ್ರದೀಪ ಸಾಮಗ, ವಿದುಷಿ ಸುಮಂಗಲಾ ರತ್ನಾಕರ್, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅವಿನಾಶ್ ಬೈಪಾಡಿತ್ತಾಯ, ಮಹೇಶ್ ಪದ್ಯಾಣ, ನಾರಾಯಣ ಹೆಬ್ಬಾರ್

ಕಾರ್ಯಕಾರಿ ಮಂಡಳಿ:

ರವಿ ಮಡೋಡಿ (ಯೋಜನಾಧ್ಯಕ್ಷ), ಅಶ್ವಿನಿ ಹೊದಲ (ಯೋಜನಾ ಕಾರ್ಯದರ್ಶಿ), ವಿಂಧ್ಯಾಶ್ರೀ ಸೋಮಯಾಜಿ (ಯೋಜನಾ ಸಹಕಾರ್ಯದರ್ಶಿ), ನಟರಾಜ ಉಪಾಧ್ಯ, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ಅಜಿತ್ ಕಾರಂತ್, ಇಟಗಿ ಮಹಾಬಲೇಶ್ವರ ಭಟ್, ಪಟ್ಲಾಜೆ ವಸಂತಕೃಷ್ಣ, ಡಾ. ಶ್ರೀಕೃಷ್ಣ ಭಟ್ ಸುಣ್ಣಂಗುಳಿ, ವಿದ್ಯಾಹೆಗಡೆ ಕವಿತಾಸ್ಫೂರ್ತಿ, ಶಿವಕುಮಾರ ಬಿ. ಅಳಗೋಡು

ಗೌರವಾನ್ವಿತ ಸ್ವಯಂಸೇವಕರು:

ಗಣಪತಿ ಭಟ್ ಪಿ., ವಸುಮತಿ ಜಿ., ಅನಿತಾ ಎಂ. ಜಿ. ರಾವ್, ರಂಜನ ಭಟ್, ಶಶಿಕಲಾ ಮೂರ್ತಿ, ರಘುರಾಜ್ ಶರ್ಮ, ಚಂದ್ರ ಆಚಾರ್, ಸುಬ್ರಹ್ಮಣ್ಯ ಭಾಗವತ್, ಉಮೇಶ್ ಶಿರೂರು, ವೆಂಕಟೇಶ್ ಹೆಗಡೆ, ವೆಂಕಟೇಶ್ ವೈದ್ಯ, ಕೆ. ಗೋವಿಂದ ಭಟ್ ಬೆಂಗಳೂರು, ಸತೀಶ್ ಯಲ್ಲಾಪುರ, ಮಯೂರಿ ಉಪಾಧ್ಯಾಯ, ಶ್ರೀಕಾಂತ್ ನಾಯಕ್, ರವಿ ಕಾಮತ್ ಕುಮಟಾ, ರಾಮಕೃಷ್ಣ ಮರಾಠಿ

ಸಹಕಾರ:

ಪ್ರಸಂಗ ಕವಿಗಳು:

ಬಲಿಪ ನಾರಾಯಣ ಭಾಗವತ, ಹೊಸ್ತೋಟ ಮಂಜುನಾಥ ಭಾಗವತ, ಪ್ರೊ. ಎಂ. ಎ. ಹೆಗಡೆ, ಡಾ. ಅಮೃತ ಸೋಮೇಶ್ವರ, ಶ್ರೀಧರ ಡಿ. ಎಸ್., ಎಂ. ಆರ್. ಲಕ್ಷ್ಮೀನಾರಾಯಣ, ಮಧುಕುಮಾರ್ ಬೋಳೂರು, ಅಗರಿ ಭಾಸ್ಕರ ರಾವ್, ಅಂಬರೀಷ ಭಾರದ್ವಾಜ, ಶಿವಕುಮಾರ ಬಿ. ಅಳಗೋಡು, ದಿನೇಶ ಉಪ್ಪೂರ, ಗಿಂಡೀಮನೆ ಮೃತ್ಯುಂಜಯ, ಇಟಗಿ ಮಹಾಬಲೇಶ್ವರ ಭಟ್, ವಿಶ್ವವಿನೋದ ಬನಾರಿ, ಮಧೂರು ವೆಂಕಟಕೃಷ್ಣ, ಡಾ. ಪಟ್ಲಾಜೆ ಗಣೇಶ ಭಟ್

ಕವಿಚರಿತ್ರೆ ಮತ್ತು ಪ್ರಸಂಗಯಾದಿ:

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಡಾ. ಪಾದೇಕಲ್ಲು ವಿಷ್ಣು ಭಟ್

ಸಂಸ್ಥೆಗಳು:

ಕರ್ನಾಟಕ ಯಕ್ಷಗಾನ ಅಕಾಡೆಮಿ & ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಸರ್ಕಾರ), ಯಕ್ಷಗಾನ ಕಲಾರಂಗ ಉಡುಪಿ, ಯಕ್ಷಸಿಂಚನ ಬೆಂಗಳೂರು

ಪ್ರಸಂಗ ಪುಸ್ತಕ ಒದಗಣೆ ಮತ್ತಿತರ:

ಡಾ. ರಾಧಾಕೃಷ್ಣ ಉರಾಳ್, ಅಗರಿ ಭಾಸ್ಕರ ರಾವ್, ಗೋಪಾಲಕೃಷ್ಣ ಭಾಗವತ್, ಶ್ರೀಪಾದಗದ್ದೆ, ಮುರಳಿ ಶ್ರೇಣಿ, ಅನಂತ ದಂತಳಿಕೆ, ಗುರುನಂದನ್ ಹೊಸೂರು, ನಾರಾಯಣ ಶಾನುಭಾಗ, ನಾರಾಯಣ ಯಾಜಿ, ಶೇಷಗಿರಿಯಪ್ಪ, ಎಸ್. ಎಂ. ಹಗಡೆ, ದಿವಾಕರ ಹೆಗಡೆ, ನಿತ್ಯಾನಂದ ಹೆಗಡೆ ಮೂರೂರು, ಶ್ರೀನಿಧಿ ಡಿ. ಎಸ್., ರವೀಂದ್ರ ಐತುಮನೆ, ಗುರುರಾಜ ಹೊಳ್ಳ ಬಾಯಾರು, ಸುರೇಶ್ ಹೆಗಡೆ ಬೆಳಸಲಿಗೆ, ಮನೋಹರ ಕುಂದರ್, ನಂದಳಿಕೆ ಬಾಲಚಂದ್ರ ರಾವ್, ರಘುರಾಮ್ ಮುಳಿಯ, ಸುಧಾ ಕಿರಣ್ ಅಧಿಕ ಶ್ರೇಣಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಎ. ಎನ್. ಹೆಗಡೆ, ಮುರಳೀಧರ ಉಪಾಧ್ಯ

ಯಕ್ಷವಾಹಿನಿ ಸಂಸ್ಥೆ

ಗೌರವಾನ್ವಿತ ಸಲಹಾ ಮಂಡಳಿ:

ಮಲ್ಪೆ ಲಕ್ಷ್ಮೀನಾರಾಯಣ ಸಾಮಗ (ಗೌರವಾಧ್ಯಕ್ಷರು), ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ, ಡಾ. ಪ್ರದೀಪ ಸಾಮಗ, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅನಂತ ಪದ್ಮನಾಭ ಫಾಟಕ್, ವಿದುಷಿ ಸುಮಂಗಲಾ ರತ್ನಾಕರ್, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ರಾಘವೇಂದ್ರ ಮಯ್ಯ (ಲೆಕ್ಕ ಪರಿಶೋಧಕರು)

ವಿಶ್ವಸ್ಥ ಮಂಡಳಿ ಮತ್ತು ಕಾರ್ಯಕಾರಿ ಮಂಡಳಿ:

ಡಾ. ಆನಂದರಾಮ ಉಪಾಧ್ಯ (ಅಧ್ಯಕ್ಷ), ನಟರಾಜ ಉಪಾಧ್ಯ (ಕಾರ್ಯದರ್ಶಿ), ರವಿ ಮಡೋಡಿ (ಖಜಾಂಚಿ)

ಆರ್ಥಿಕ ಸಹಾಯ:

ಅಶೋಕ್ ಶೆಟ್ಟಿ ವಿ. ಕೊಡ್ಲಾಡಿ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

ಪುಸ್ತಕ ಸಹಾಯ:

ವಿದುಷಿ ಸುಮಂಗಲಾ ರತ್ನಾಕರ್, ಮಂಟಪ ಪ್ರಭಾಕರ ಉಪಾಧ್ಯ, ಡಾ. ಆನಂದರಾಮ ಉಪಾಧ್ಯ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

ಯಕ್ಷಪ್ರಸಂಗಕೋಶ ಯೋಜನೆ

ಕನ್ನಡ ಕಾವ್ಯದ ಚರಿತ್ರೆಯಲ್ಲಿ ಬಹುದೊಡ್ಡ ಸ್ಥಾನ ಪಡೆಯಬೇಕಾದ ಕೃತಿಗಳು ಅವಜ್ಞೆಗೊಳಗಾದುದನ್ನು ಗಮನಿಸಿ ಯಕ್ಷವಾಹಿನಿ ಸಂಸ್ಥೆಯಿಂದ ಯಕ್ಷಪ್ರಸಂಗಕೋಶದ ನಿರ್ಮಾಣವಾಗುತ್ತಿದೆ. ಯಕ್ಷಗಾನ ಪ್ರಸಂಗಗಳು ಪ್ರಯೋಗದ ಆಧಾರ ಪಠ್ಯಗಳು. ವ್ಯಾಖ್ಯಾನದ ಅಗತ್ಯವೂ ಇರುವುದರಿಂದ ಪ್ರಸಂಗಕವಿಗಳು ಬರೆದ ಗೀತೆಗಳು ಗುಣಮಟ್ಟದಲ್ಲೂ ಮೇಲಾಗಿದ್ದು ವಿದ್ವಾಂಸರಿಂದ ಮರಳಿ ಮರಳಿ ವ್ಯಾಖ್ಯಾನಕ್ಕೆ ಒಳಗಾಗಿವೆ. ಇಂತಹ ಪಠ್ಯಗಳನ್ನು ಖಿಲವಾಗದಂತೆ ಶಾಶ್ವತವಾಗಿ ಕಾಪಿಡುವುದೂ, ಜಾಗತಿಕ ಮಟ್ಟದಲ್ಲಿ ಲಭ್ಯವಾಗುವಂತೆ ಮಾಡುವುದೂ ನಮ್ಮ ಯಕ್ಷಪ್ರಸಂಗಕೋಶದ ಉದ್ದೇಶ. ಅದಕ್ಕೆ ಇಂದು ಅಂತರಜಾಲವೇ ಸೂಕ್ತ ಮಾಧ್ಯಮವಾಗಿದೆ. ಅಂತರಜಾಲದ ಮೂಲಕ ಪ್ರಕಟವಾದ ಪ್ರಸಂಗವೂ, ಅದನ್ನು ಸಿದ್ಧಪಡಿಸಿದ ಸಂಸ್ಥೆಯೂ ಇಡೀ ವಿಶ್ವದ ಮುಂದೆ ನಿಂತಿರುತ್ತದೆ ಎಂಬ ಅರಿವನ್ನುಇಟ್ಟುಕೊಂಡೇ ಪ್ರಸಂಗಗಳನ್ನು ಸಿದ್ಧಪಡಿಸಿದ್ದೇವೆ.

ಪ್ರಸಂಗಗಳ ಪ್ರಸ್ತುತ ರೂಪದಲ್ಲಿ ಇರುವ ಮುದ್ರಣ ದೋಷಗಳು, ವ್ಯಾಕರಣ ದೋಷಗಳು, ಗ್ರಾಮ್ಯಶಬ್ದಗಳ ಬಳಕೆಯಿಂದಾದ ಶೈಥಿಲ್ಯ, ಶಬ್ದಗಳನ್ನು ಬಿಡಿಸಬೇಕಾಗಿದ್ದಲ್ಲಿ ಕೂಡಿಸಿ, ಕೂಡಿಸಬೇಕಾಗಿದ್ದಲ್ಲಿ ಬಿಡಿಸಿ ಉಂಟಾದ ದೋಷಗಳು, ಮಟ್ಟುಗಳ ಹೆಸರುಗಳಲ್ಲಿ ಕಣ್ತಪ್ಪಿನಿಂದ ನುಸುಳಿದ ದೋಷಗಳು, ಆಟ ಆಡಿಸುವಾಗ ಅನುಕೂಲಕ್ಕೆ ತಕ್ಕಂತೆ ಭಾಗವತರು ಸೇರಿಸಿಕೊಂಡ ಅನ್ಯ ಪ್ರಸಂಗಗಳ ಪದಗಳು ಮುದ್ರಿತರೂಪದಲ್ಲಿ ಸೇರಿಹೋಗಿರುವುದು, ಮುದ್ರಣವಾಗುವಾಗ ಕೆಲವು ಪದಗಳು ಬಿಟ್ಟುಹೋಗಿರುವುದು ಇವುಗಳೆಲ್ಲ ಕವಿಯು ಶ್ರಮವಹಿಸಿ ರಚಿಸಿದ ಸುಂದರ ರಚನೆಯಲ್ಲಿ ಅರ್ಥಾಂತರವನ್ನೋ, ಅಪಾರ್ಥವನ್ನೋ ಉಂಟುಮಾಡುವ ಸಾಧ್ಯತೆಯಿದೆ. ಈಗ ಪ್ರಕಟಿಸುತ್ತಿರುವ ಪ್ರಸಂಗಗಳನ್ನು ಸಾಧ್ಯವಾದ ಮಟ್ಟಿಗೆ ಈ ದೋಷಗಳಿಂದ ಮುಕ್ತಗೊಳಿಸಿದ್ದೇವೆ ಎಂಬ ಭರವಸೆ ನಮಗಿದೆ. ಒಟ್ಟಿನಲ್ಲಿ ನಮ್ಮ 'ಪ್ರಸಂಗಕೋಶ'ದಿಂದ ಪಡೆದುಕೊಂಡ ಪ್ರಸಂಗವು ಶುದ್ಧವಾಗಿರಬೇಕೆಂಬುದೇ ನಮ್ಮ ಅಪೇಕ್ಷೆ.

ಶ್ರೀಧರ ಡಿ. ಎಸ್.
ಪ್ರಧಾನ ಸಂಪಾದಕರು

ಗಿಂಡೀಮನೆ ಮೃತ್ಯುಂಜಯ
ಸಹ ಸಂಪಾದಕರು

ರವಿ ಮಡೋಡಿ
ಯೋಜನಾಧ್ಯಕ್ಷರು

ಯಕ್ಷವಾಹಿನಿ

ಯಕ್ಷಗಾನವು ಕನ್ನಡ ಸಂಸ್ಕೃತಿಯ ಕಿರೀಟದಲ್ಲಿ ರಾರಾಜಿಸುತ್ತಿರುವ ದೊಡ್ಡ ನವಿಲುಗರಿಯು. ಅಖಂಡ ಕರ್ನಾಟಕದ ಯಕ್ಷಗಾನ ಪರಂಪರೆಯ ಹಿರಿಮೆ ಗರಿಮೆಗಳನ್ನು ಹೆಚ್ಚಿಸುವತ್ತ ಅಂತರಜಾಲದ ಸಾಧ್ಯತೆಗಳನ್ನು ಸದುಪಯೋಗಪಡಿಸಿಕೊಳ್ಳುವುದೇ ಯಕ್ಷವಾಹಿನಿ ಸಂಸ್ಥೆಯ ಮುಖ್ಯ ಕಾಣ್ಕೆಯಾಗಿದೆ. ಯಕ್ಷಪ್ರಸಂಗಯಾದಿ ಮತ್ತು ಯಕ್ಷಪ್ರಸಂಗಕೋಶ ಇವೆರೆಡು ನಾವು ಈಗಾಗಲೇ ತೊಡಗಿಸಿಕೊಂಡಿರುವ ಪ್ರಾಥಮಿಕ ಯೋಜನೆಗಳು. ಈ ಯೋಜನೆಗಳಿಗೆ ಬೆನ್ನುಲುಬಾಗಿ ನಮ್ಮೊಂದಿಗಿರುವ ಎಲ್ಲಾ ವಿದ್ವಾಂಸರು, ಪ್ರಸಂಗಕವಿಗಳು, ಸ್ವಯಂಸೇವಕರು, ಪ್ರಾಯೋಜಕರು ಹಾಗೂ ಎಲ್ಲಾ ರೀತಿಯ ಬೆಂಬಲ ಮತ್ತು ಸಹಾಯ ನೀಡುತ್ತಿರುವ ವಿಶ್ವವ್ಯಾಪಿ ಯಕ್ಷಪ್ರೇಮಿಗಳಿಗೆ ವಿನಮ್ರ ಧನ್ಯವಾದಗಳು. ಪ್ರಾಯೋಜಕತ್ವ ಹೆಚ್ಚಿದಂತೆ ನಮ್ಮ ಇನ್ನೂ ಅನೇಕ ಕನಸುಗಳು ಯೋಜನೆಗಳಾಗಿ ಅನಾವರಣಗೊಳ್ಳಲಿವೆ. ನಿಮ್ಮ ಹೆಚ್ಚುತ್ತಿರುವ ಸಹಕಾರ, ಸಹಾಯ, ಬೆಂಬಲ ಮತ್ತು ಆಶೀರ್ವಾದಕ್ಕೆ ನಾವು ಚಿರಋಣಿಗಳು.

ಪ್ರೊ. ಮಲ್ಪೆ ಲಕ್ಷ್ಮೀನಾರಾಯಣ ಸಾಮಗ, ಗೌರವಾಧ್ಯಕ್ಷರು

ಡಾ. ಆನಂದರಾಮ ಉಪಾಧ್ಯ, ಕಾರ್ಯಾಧ್ಯಕ್ಷ ಮತ್ತು ವಿಶ್ವಸ್ಥ

ನಟರಾಜ ಉಪಾಧ್ಯ, ಕಾರ್ಯದರ್ಶಿ ಮತ್ತು ವಿಶ್ವಸ್ಥ

ರವಿ ಮಡೋಡಿ, ಖಜಾಂಚಿ ಮತ್ತು ವಿಶ್ವಸ್ಥ

ಸಾರಾಂಶ

ಪ್ರಸಂಗ ವಿಧ:

ಪೌರಾಣಿಕ

ಆಧಾರ ಗ್ರಂಥ:

ತಿಳಿದಿಲ್ಲ

ಭಾಷೆ:

ಕನ್ನಡ

ಹಿಂದಿನ ಪ್ರಕಾಶನಗಳ ವಿವರ:

ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ ಪ್ರಕಟಿತ ಅರುಣಸಾರಥ್ಯ ಮತ್ತು ಇತರ ಯಕ್ಷಗಾನ ಪ್ರಸಂಗಗಳು ಸಂಪುಟ - ೨೦೦೫

ಹಕ್ಕುಸ್ವಾಮ್ಯ ವಿವರ:

ಈ ಆವೃತ್ತಿಯನ್ನು ಹೇಗಿದೆಯೋ ಹಾಗೆಯೇ ಸಮಗ್ರವಾಗಿ ಮುದ್ರಿಸಲು ಯಾ ಅಂತರಜಾಲದ ಮೂಲಕ ಉಚಿತವಾಗಿ ಹಂಚಲು ಯಾವುದೇ ಅಭ್ಯಂತರ ಇಲ್ಲ. ಮೂಲ ಪ್ರಕಾಶನಗಳ ಹಕ್ಕುಸ್ವಾಮ್ಯ ಹೇಗಿದೆಯೋ ಹಾಗೆಯೇ ಉಳಿದಿರುತ್ತದೆ.

ಒಟ್ಟು ಪದ್ಯಗಳು:

೩೨

ಪಾತ್ರಗಳು:

ಕಶ್ಯಪ ಋಷಿ, ವಿನತೆ, ಕದ್ರು, ಅರುಣ, ಬ್ರಹ್ಮ, ಸೂರ್ಯ.

ಕಥಾ ಸಾರಾಂಶ:

ಕಶ್ಯಪ ಪ್ರಜಾಪತಿಯ ವರವಿಶೇಷದಿಂದ ಆತನ ಮಡದಿಯರಾದ ಕದ್ರು ಹಾಗೂ ವಿನತೆಯರು ಅನುಕ್ರಮವಾಗಿ ಸಾವಿರ ಸರ್ಪ ಹಾಗೂ ಎರಡು ಅಂಡಗಳನ್ನು ಪಡೆಯುತ್ತಾರೆ. ಬಹುಕಾಲ ನಿರೀಕ್ಷಿಸಿದರೂ ಅಂಡಗಳಿಂದ ಸಂತತಿ ಉದಿಸದಿರಲು, ವಿನತೆ ಕುತೂಹಲದಿಂದ ಒಂದು ಅಂಡವನ್ನು ಪರೀಕ್ಷಿಸುತ್ತಾಳೆ. ಅದು ಕೈತಪ್ಪಿ ಬಿದ್ದೊಡೆದು, ಅಪರಿಪೂರ್ಣಾಂಗನೂ ಅನೂರುವೂ ಆದ ಅರುಣ ಜನಿಸುತ್ತಾನೆ. ನಿರಾಶೆಯಿಂದ ಎದೆಗುಂದಿದ ವಿನತೆಯನ್ನು ಕಶ್ಯಪ ಸಾಂತ್ವನಗೊಳಿಸುತ್ತಾನೆ. ವಿನತೆ ಮಗನನ್ನು ಪ್ರೀತಿಯಿಂದ ಪೋಷಿಸುತ್ತಾಳೆ.

ದೇಹದ ಊನವನ್ನು ಗಣಿಸದೆ ಅರುಣನು ವಿದ್ಯಾಬುದ್ಧಿ ಸಂಪನ್ನನಾಗಿ ಬೆಳೆಯುತ್ತಾನೆ. ತನಗೊಂದು ಉದ್ಯೋಗಬೇಕೆಂಬ ಅಪೇಕ್ಷೆಯನ್ನು ತನ್ನ ತಾಯಲ್ಲಿ ವ್ಯಕ್ತಗೊಳಿಸಿದಾಗ ಬ್ರಹ್ಮದೇವನನ್ನು ತಪಸ್ಸಿನಲ್ಲಿ ಮೆಚ್ಚಿಸುವಂತೆ ಸೂಚಿಸುತ್ತಾಳೆ. ಅದರಂತೆ ಅರುಣನು ತಪಸ್ಸು ಮಾಡಲು ಬ್ರಹ್ಮ ಪ್ರತ್ಯಕ್ಷನಾಗಿ ಅರುಣನ ಅಪೇಕ್ಷೆಯನ್ನು ಪೂರೈಸುವ ಸಲುವಾಗಿ ಸೂರ್ಯದೇವನನ್ನು ಬರಮಾಡುತ್ತಾನೆ. ಅಂತೆಯೇ ಅರುಣನ ಜನನೀ ಜನಕರನ್ನು ಕರೆಸುತ್ತಾನೆ. ಸೂರ್ಯನೊಡನೆ ಅರುಣನ ಇಚ್ಛೆಯನ್ನರುಹಿ, ಆತನ ರಥಕ್ಕೆ ಅರುಣನು ಸಾರಥಿಯಾಗಲಿ ಎಂದು ಆದೇಶಿಸುತ್ತಾನೆ. ಸೂರ್ಯನು ಅದಕ್ಕೆ ಸಂತೋಷದಿಂದ ಒಡಂಬಡುತ್ತಾನೆ. ಈ ಪ್ರಪಂಚದಲ್ಲಿ ನಿಷ್ಪ್ರಯೋಜಕರು ಯಾರೂ ಇಲ್ಲವೆಂದೂ, ನಿಯತಿಯಲ್ಲಿ ಎಲ್ಲ ವ್ಯಕ್ತಿಗಳಿಗೂ ಯುಕ್ತ ಸ್ಥಾನವಿದೆಯೆಂದೂ ಬ್ರಹ್ಮನು ನುಡಿದು ಮುಂದೆ ಇನ್ನೊಂದು ಅಂಡದಿಂದ ಜನಿಸುವ ಮಗನೂ ಕೀರ್ತಿಶಾಲಿಯಾಗುವನೆಂದು ಸೂಚಿಸುತ್ತಾನೆ. (ಅವನೇ ಗರುಡ.) ಅರುಣನು ಪರಮಾನಂದದಿಂದ ಸೂರ್ಯರಥದ ಸಾರಥ್ಯವನ್ನು ವಹಿಸಿ ಲೋಕೋತ್ತರ ಖ್ಯಾತಿಯನ್ನು ಪಡೆಯುತ್ತಾನೆ.

ಕವಿ ಪರಿಚಯ : (ಆಧಾರ: ಕರ್ನಾಟಕ ಕವಿ ಚರಿತ್ರೆ – ಡಾ. ಕಬ್ಬಿನಾಲೆ ವಸಂತ ಭಾರದ್ವಾಜ)

ಡಾ. ಅಮೃತ ಸೋಮೇಶ್ವರರವರು ೧೯೩೫ರಲ್ಲಿ ಮಂಗಳೂರು ಸಮೀಪದ ಕೋಟೆಕಾರು ಗ್ರಾಮದ ಅಡ್ಕದಲ್ಲಿ ಜನಿಸಿದರು. ತಂದೆ ಚಿರಿಯಂಡ, ತಾಯಿ ಅಮುಣಿ. ಅಮೃತ ಸೋಮೇಶ್ವರ ತುಳುನಾಡಿನ ಓರ್ವ ಸಾಹಿತಿ, ಹಿರಿಯ ಜಾನಪದ ವಿದ್ವಾಂಸ, ಕಾವ್ಯ, ಸಣ್ಣಕತೆ, ನಾಟಕ, ಯಕ್ಷಗಾನ, ವಿಮರ್ಶೆ ಮತ್ತು ಜಾನಪದ ಕ್ಷೇತ್ರದಲ್ಲಿ ವಿಶೇಷವಾಗಿ ಕೆಲಸ ಮಾಡಿದವರು. ವೃತ್ತಿಯಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ನಿವೃತ್ತರಾಗಿದ್ದಾರೆ. ಅಖಿಲ ಭಾರತ ತುಳು ಸಮ್ಮೇಳನದ ಅಧ್ಯಕ್ಷತೆ, ರಾಜ್ಯೋತ್ಸವ ಪ್ರಶಸ್ತಿ, ಮಂಗಳೂರು ವಿಶ್ವವಿದ್ಯಾಲಯದ ಡಾಕ್ಟರೇಟ್ ಪದವಿ, ಪಾರ್ತಿಸುಬ್ಬ ಪ್ರಶಸ್ತಿ ಮುಂತಾದ ಗೌರವಗಳಿಗೆ ಭಾಜನರು.

ಎಲೆಗಿಳಿ, ರುದ್ರಶಿಲೆಸಾಕ್ಷಿ, ವನಮಾಲೆ, ಭ್ರಮಣ, ಉಪ್ಪುಗಾಳಿ, ಯಕ್ಷಾಂದೋಳ, ಬಾಮಕುಮಾರ ಸಂಧಿ, ಕಾಲೆವಾಲ, ಅಪಾರ್ಥಿನಿ ಮುಂತಾದ ಹಲವು ಸಾಹಿತ್ಯಕೃತಿಗಳ ಕರ್ತೃ. ತುಳು ನಿಘಂಟು ಯೋಜನೆಯ ಸಲಹಾ ಮಂಡಳಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.

ಇವರು ಬರೆದ ಪ್ರಸಂಗಗಳು: ಅಮರಶಿಲ್ಪಿ ವೀರಕಲ್ಕುಡ, ಸಹಸ್ರಕವಚಮೋಕ್ಷ, ಕಾಯಕಲ್ಪ, ಪುತ್ತೂರಮುತ್ತು, ಅಮರವಾಹಿನಿ, ತ್ರಿಪುರ ಮಥನ, ಮಹಾಕಲಿ ಮಗಧೇಂದ್ರ, ವಂಶವಾಹಿನಿ, ಮಹಾಶೂರ ಭೌಮಾಸುರ, ಚಕ್ರವರ್ತಿ ದಶರಥ, ಚಂದ್ರಮತೀಸ್ವಯಂವರ, ವರುಣಯಾಗ, ಸಾರ್ವಭೌಮ ಸಹಸ್ರಾನೀಕ, ಚಾಲುಕ್ಯ ಚಕ್ರೇಶ್ವರ, ಅಂಧಕಮೋಕ್ಷ, ಘೋರ ಮಾರಕ, ಮಾರಿಷಾಕಲ್ಯಾಣ, ಅಂಗುಲಿಮಾಲಾ, ಅಮರವೀರದ್ವಯ ಕೋಟಿಚೆನ್ನಯ, ಅರುಣ ಸಾರಥ್ಯ, ಋಷ್ಯಶೃಂಗ, ತನಿಯ – ಗುರುವರ ಕಾಳಗ, ಪ್ರಜ್ಞಾವಿಜಯ, ಭುವನಭಾಗ್ಯ, ಮದಿರಾಸುರ ಮರ್ದನ, ಮಿತ್ರಭೇದ, ವಿದ್ಯಾವಿಜಯ, ಶ್ರೀದೇವಿಭಗವತಿ, ಸಂಗ್ಯಾ ಬಾಳ್ಯಾ, ಸತ್ಯನಾಪುರದ ಸಿರಿ, ಸಿರಿರಾಮ ಪಾದುಕೆ.

ಟಿಪ್ಪಣಿ:

ಪ್ರಸಂಗ ಸಾಹಿತ್ಯ

ಸೌರಾಷ್ಟ್ರ - ತ್ರಿವುಡೆ
ವರಪ್ರಜಾಪತಿ ಕಶ್ಯಪನ ಸತಿ |
ಯರಲಿ ವಿನತಾ ಕದ್ರು ಯೆಂಬರ |
ಪರಮ ಸೇವೆಗೆ ತೋಷಿಸುತ ಮುನಿ | ಯೊರೆದನಾಗ || ೧ ||

ಒಲಿದೆ ಶ್ರದ್ಧಾಪೂರ್ಣ ಸೇವೆಗೆ |
ಲಲನೆಯರೆ ನೀವಿಚ್ಛಿಸುವ ವರ |
ಗಳನು ಕೇಳುವುದೆನಲು ಸಂತಸ | ತಳೆದು ಕದ್ರು || ೨ || 2 ||

ಮಧುಮಾಧವಿ – ಅಷ್ಟ (ಮಧುಮಾಧವಿ – ಏಕ)
ಎರೆಯ ಲಾಲಿಸಿ ಕೇಳು ಎನ್ನ ವಾಂಛಿತವ |
ವರವ ನೀಡೆನಗೆ ಸಂತಾನ ಸಾವಿರವ ||
ಉರುತರ ಸೌಂದರ್ಯಯುಕ್ತವಾಗಿರುವ |
ಅರಳಿದ ಹೆಡೆಯುಳ್ಳ ನಾಗರ ಕುಲವ || ೧ ||

ಮಣಿದೆಂದಳಾ ವಿನತೆಯು ವಿನಯದಲಿ |
ತನಯರೀರ್ವರೆ ಸಾಕು ತವ ಕರುಣದಲಿ ||
ಅನಘ ಲೋಕೋತ್ತರ ಕೀರ್ತಿಯು ನಿಲಲಿ |
ಜನನೀ ಜನಕರಿಂಗೆ ಧನ್ಯತೆ ತರಲಿ || ೨ || 4 ||

ಭಾಮಿನಿ (ಅರ್ಧ)
ರಮಣಿಯರ ವಾಂಛೆಯನು ಲಾಲಿಸಿ |
ಯಮಿವರೇಣ್ಯ ತಥಾಸ್ತುಯೆನ್ನಲು |
ನಮಿಸುತ್ತೈದಿದರವರು ಮಹದಾನಂದದಿಂದಾಗ || ೧ || 5 ||

ಸಾಂಗತ್ಯ - ರೂಪಕ
ಬಳಿಕ ಕಾಲಾಂತರದಲಿ ಕದ್ರು ಗರ್ಭವ |
ತಳೆದು ಸಾಸಿರ ನಾಗಗಳನು ||
ನಲವಿಂದ ಪಡೆದು ಸಮ್ಮೋದದೊಳಿರ್ದಳು |
ಸಲಹುತ್ತ ಸರ್ಪಸಂಕುಲವ || ೧ ||

ಇತ್ತಲಾ ವಿನತೆಯು ಅಂಡಗಳೆರಡನು |
ಪೆತ್ತು ತಾ ಜತನದಿಂದದನು ||
ಒತ್ತಿನೊಳಿರಿಸಿ ನಿರೀಕ್ಷಿಸುತಿರ್ದಳು |
ಪುತ್ರೋದಯದ ಶುಭದಿನವ || ೨ || 7 ||

ಕಾಂಭೋದಿ - ಝಂಪೆ
ಬಲುದಿನ ನಿರೀಕ್ಷೆಯೊಳು ಕಳೆದು ಮತ್ತತಿ ಕುತೂ |
ಹಲದಿಂದ ವಿನತೆ ತಾನೊಮ್ಮೆ ||
ಚೆಲುವಾದ ತತ್ತಿಯೊಂದನ್ನೆತ್ತಿ ನೋಡೆ ಕರ |
ತಳದಿಂದ ಜಾರಿ ಬಿದ್ದೊಡೆಯೆ || ೧ ||

ಬಿರಿದ ತತ್ತಿಯ ಚಿಪ್ಪನೋಸರಿಸುತಾಗಲೇ |
ಹೊರಬಂದುದರೆ ಬಲಿತ ಶಿಶುವು ||
ಅರುಣವರ್ಣದೊಳೆಸೆವ ಅಪರಿಪೂರ್ಣಾಂಗನನು |
ನೆರೆನೋಡಿ ತರಹರಿಸಿ ವಿನತೆ || ೨ || 9 ||

ಭಾಮಿನಿ
ಅಕಟಕಟ ದುರ್ವಿಧಿ ವಿಲಾಸವೆ |
ವಿಕಟವಾದುದೆ ಪುತ್ರವಾಂಛೆಯು |
ವಿಕಲಶಿಶುವನು ನೋಡಿ ಸೈರಿಪೆನೆಂತೆನುತ ಬಳಿಕ ||
ಸಕಲವನು ಬಲ್ಲಾ ಮುನೀಂದ್ರನ |
ನಿಕಟಕೈದುತ ಬಿನ್ನವಿಸಿದಳು |
ಸುಖದ ಸ್ವಪ್ನವೆ ಕಳಚಿದುದು ವಿಕಲಾಂಗ ಜನನದಲಿ || ೧ || 10 ||

ಸಾಂಗತ್ಯ – ರೂಪಕ
ಬಯಕೆಯು ಬಯಲಾಯ್ತು ಬವಣೆಯ ಬಾಳಿನು |
ದಯವಾದುದೇನ ಪೇಳುವೆನು ||
ದಯಪಾಲಿಸಿದ ವರ ಕ್ಷಯವಾಯ್ತೇಕೆನಲನು |
ನಯದಿ ಮತ್ತೆಂದ ಕಶ್ಯಪನು || ೧ ||

ಸತಿಯೆ ನೀನಿಂತೇಕೆ ವ್ಯಥಿಸುವೆ ಜನಿಸಿದ |
ಸುತನನು ಸಲಹು ಪ್ರೇಮದಲಿ ||
ಹತಭಾಗ್ಯನಲ್ಲ ವಿಶ್ರುತಕೀರ್ತಿ ಪಡೆವನು |
ಚ್ಯುತಿಯಾಗದೆನ್ನಯ ವರವು || ೨ ||

ಎಂದು ಸಾಂತ್ವನಗೈಯೆ ವಿನತೆಯು ಮಾನಸ |
ದೊಂದು ತಾಪವನು ನೀಗುತಲಿ ||
ಕಂದನ ಪೋಷಿಸುತೀರ್ದಳು ಮಮತೆಯ |
ಬಂಧುರತೆಯನು ಸೂಸುತ್ತ || ೩ || 13 ||

ಶಂಕರಾಭರಣ - ಏಕ
ಅರುಣವರ್ಣದಿಂದ ಮೆರೆವ | ತರಳನಿಂಗೆ ಅರುಣನೆಂಬ ||
ವರಸುನಾಮವಿತ್ತು ವಿನತೆ | ಪೊರೆಯುತಿರ್ದಳು || ೧ ||

ಊರುಭಾಗವಿಲ್ಲದಿಹ ಆ | ನೂರು ಬಾಲ ಚಾರುತೇಜ ||
ದೋರಿ ಬೆಳೆಯುತಿರ್ದನಂದು | ಭೂರಿ ವಹಿಲದಿ || ೨ ||

ತನುವಿನೊಂದು ಊನವನ್ನು | ಗಣಿಸದೆಯೆ ವಿವೇಕಿಯಾಗಿ ||
ವಿನುತ ವಿದ್ಯೆಗಳಲಿ ತನ್ನ | ಮನವ ನಿಲಿಸಿದ || ೩ || 16 ||

ಕಾಂಭೋದಿ - ಝಂಪೆ
ಅರುಣ ತಾನೊಮ್ಮೆ ಕರೆದೆಂದ ತಾಯೊಡನೆ ಜೀ |
ವರಿಗೆ ಉದ್ಯೋಗ ಭೂಷಣವು ||
ಎರಕವಹ ವೃತ್ತಿಯೊಂದಿರದೆನ್ನ ಬಾಳುವೆಯು |
ಬರಡಾಗದಂತೆ ಕರುಣಿಪುದು || ೧ ||

ತರಳ ನಿನ್ನಯ ನುಡಿಯ ಕೇಳಿ ಸಂತಸವಾಯ್ತು |
ಕರುಣಿಪನು ಪರಮೇಷ್ಠಿ ನಿನಗೆ ||
ಅರವಿಂದಭವನ ಮೆಚ್ಚಿಸು ತಪದೊಳೆಂದೆನಲು |
ಹರುಷದಲಿ ನಮಿಸಿ ಪೊರವಂಟ || ೨ || 18 ||

ಆರ್ಯಸವಾಯಿ - ಏಕ
ಅನುಪಮ ಭಕ್ತಿಯೊಳರುಣನು ಬ್ರಹ್ಮನ |
ಘನತಪಗೈಯಲು ಮೆಚ್ಚುತಲಿ ||
ಸನಿಹಕೆ ಬಂದತಿ ವಾತ್ಸಲ್ಯದಿ ಶಿರ |
ವನು ತಡವುತ ಹರುಷದೊಳೆಂದ || ೧ || 19 ||

ನವರೋಜು - ಏಕ
ಮೆಚ್ಚಿದೆ ಮೆಚ್ಚಿದೆನಿದಕೆ | ತವ |
ನಿಶ್ಚಲ ಘನತರ ತಪಕೆ ||
ಉಚ್ಚರಿಸೈ ಮನದಾಕಾಂಕ್ಷೆಯ ನೀ |
ನಿಚ್ಛಿಪ ವರವನು ನಿಶ್ಚಯವೀವೆನು || ೧ ||

ಧನ್ಯ ನಾ ನೀನೊಲಿದುದಕೆ | ನೀ |
ನೆನ್ನಿಚ್ಛೆಯ ಕೇಳು ಪರಾಕೆ ||
ಚೆನ್ನಾಗಿಹ ಉದ್ಯೋಗವದಿಲ್ಲದೆ |
ಮನ್ನಣೆಯುಂಟೇ ಮಹಿಯೊಳು ಸ್ವಾಮಿಯೆ || ೨ ||

ಉತ್ತಮ ಕರ್ತವ್ಯವನು | ನೀ |
ನಿತ್ತೆನ್ನ ಹರಸಲು ನಾನು ||
ಸಾರ್ಥಕಗೊಳಿಪೆನಪಾಂಗನ ಬದುಕನು |
ಪೆತ್ತವರಿಗೆ ಪ್ರಖ್ಯಾತಿಯ ತಹೆನೈ || ೩ || 22 ||

ವಾರ್ಧಕ
ಅದಕೆ ಸಂತೋಷಿಸುತಲೆಂದನೆಲೆ ವತ್ಸ ದಿಟ |
ವಿದು ನಿನ್ನ ನುಡಿಯು ಉದ್ಯೋಗಹೀನಗೆ ಜಗದಿ |
ಬದುಕೆ ನಿಸ್ಸಾರಭಾರವು ಸುಕೃತಿ ಕರ್ತವ್ಯಪರನು ಸಂದೇಹವಿಲ್ಲ ||
ವಿದಿತ ವೃತ್ತಿಯನೊಂದನೀವೆನೆಂದೆನುತಲಾ |
ವಿಧಿಯು ಕಶ್ಯಪ ವಿನತೆಯರನು ಬರಮಾಡುತಲಿ |
ಪದುಮಬಾಂಧವನನ್ನು ಮುದದಿ ನೆನೆಯಲು ಬಂದ ಬಾನನಿಳಿದಾಗ ಭಾನು || ೧ || 23 ||

ಮಾರವಿ - ಏಕ
ದಿನಮಣಿ ಮಣಿಯುತಲೆಂದನು ದ್ರುಹಿಣನೆ |
ನೆನೆದ ಹದನವೇನು ||
ಜನಕನು ಮೇಣ್ ವಿನತಾಂಬೆಯು ಮತ್ತೀ |
ಅನೂರು ಇಹರೇಕೆ || ೧ || 24 ||

ಬೇಗಡೆ – ತ್ರಿವುಡೆ
ಜಗವ ಬೆಳಗುವ ಭಾಸ್ಕರನೆ ಕೇಳು | ಈ ಅರುಣನಾಮಕ |
ಸುಗುಣನಿಧಿ ವಾವೆಯಲಿ ಸೋದರನು ||
ತಗುವ ವೃತ್ತಿಯನೊಂದನಿಚ್ಛಿಸಿ |
ಮಿಗೆ ಭಕುತಿಯೊಳು ತಪಿಸೆ ಮೆಚ್ಚಿಹೆ |
ಮುಗಿವಿರದ ಕರ್ತವ್ಯಪರ ನಿನ |
ಗೊಗುಮಿಗೆಯ ಸಾರಥಿಯದಾಗಲಿ || ೧ ||

ಚಿಣ್ಣ ಕೇಳರುಣಾಖ್ಯ ಜಗದಲ್ಲಿ | ಬರಿಯಪ್ರಯೋಜಕ |
ರನ್ನುವವರಾರಿಲ್ಲ ಜೀವರಲಿ ||
ತನ್ನ ದೇಹದ ಊನತೆಯ ನೆನೆ |
ದುಣ್ಣದುರಿಯದೆ ಆತ್ಮಶಕ್ತಿಯ |
ಪನ್ನತಿಕೆಯಲಿ ಸಾಧಿಸಲು ಪರ |
ಮೋನ್ನತಿಯು ಸಿದ್ಧಿಪುದು ಸತ್ಯವು || ೨ || 26 ||

ಸಾಂಗತ್ಯ – ರೂಪಕ
ಲಾಲಿಸಿ ಕಶ್ಯಪ ವಿನತೆಯರೇ ನಿಮ್ಮ |
ಬಾಲ ಲೋಕಶ್ರುತನಹನು ||
ಕಾಲವನಳೆವ ದಿನೇಶಗೆ ಸಾರಥಿ |
ಯೊಳಿಗವನು ಗೈವ ಮುಂದೆ || ೧ ||

ಆದಿತ್ಯನುದಿಸುವ ಮುನ್ನ ಕೆಂಬಣ್ಣದಿ |
ಮೈದೋರಿ ಜಾಡ್ಯವ ಕಳೆವ ||
ಚೋದಿಸಿ ಸಪ್ತಾಶ್ವಗಳನು ನಿರಂತರ |
ಮೋದವನೀಯುವನಿಳೆಗೆ || ೨ ||

ವಾಣೀವಲ್ಲಭನಿಂತು ವಿಧಿಸೆ ಸಂತೋಷದಿ |
ಆನತರಾಗುತೆಲ್ಲವರು ||
ಈ ನಿನ್ನ ನಿಯತಿಯೊಳೆಲ್ಲರಿಗಿದೆ ಯುಕ್ತ |
ಸ್ಥಾನವೆಂಬುದು ಬಗೆಗಾಯ್ತು || ೩ ||

ಅರುಣ ಬಿನ್ನವಿಸಿದ ಪರಮಪೂಜ್ಯರೆ ನಿಮ್ಮ |
ಕರುಣದಿ ರವಿರಥ ಮುಖದಿ ||
ಚಿರಕಾಲವಿರುವಂಥ ವರಯೋಗವೊದಗಿತು |
ಹರುಷದಿ ಕರ್ತವ್ಯಗೈವೆ || ೪ ||

ಎನಲು ವಿಧಾತ ಮತ್ತೊಂದನು ಕೇಳೆಲೆ |
ವಿನತೆಯೆ ನಿನಗೆ ಮತ್ತೋರ್ವ ||
ತನುಜನು ಜನಿಪನು ಉಭಯರೀ ಲೋಕದೊ |
ಳನುಗಾಲ ಕೀರ್ತಿತರಹರು || ೫ || 31 ||

ಭಾಮಿನಿ
ಶರಜಸಂಭವ ಹರಸಿ ತಾ ಮೈ |
ಗರೆಯಲರುಣನು ಪೆತ್ತವರ ಪದ |
ಕೆರಗಿ ಸಪ್ತಾಶ್ವಗಳ ಬಿಗಿದಿಹ ರಥಕೆ ಬಲವಂದು ||
ಖರಕಿರಣನಿಗೆ ನಮಿಸಿ ವಾಘೆಯ |
ಧರಿಸಿ ಮಂದಸ್ಮಿತದಿ ಸಾರಥಿ |
ವರನೆನಿಸಿ ಚೋದಿಸಿದನಂಬರಮಣಿಯ ಸ್ಯಂದನವ || ೧ || 32 ||

*****ಶುಭಂ*****

ಕೃತಜ್ಞತೆಗಳು

ಅಂತರಜಾಲ ಪ್ರಕಾಶನ ಪ್ರಾಯೋಜಕರು: ನಿರೀಕ್ಷಿಸಲಾಗಿದೆ

ಮೂಲ ಪ್ರಕಾಶಕರು: ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ ಪ್ರಕಟಿತ ಅರುಣಸಾರಥ್ಯ ಮತ್ತು ಇತರ ಯಕ್ಷಗಾನ ಪ್ರಸಂಗಗಳು ಸಂಪುಟ - ೨೦೦೫

ಪ್ರಸಂಗ ಪ್ರತಿ ಆಧಾರ: ಯುಗಪುರುಷ ಪ್ರಕಟಣಾಲಯ ಪ್ರಕಟಿತ ಪ್ರತಿ

ಪ್ರಸಂಗ ಪ್ರತಿ ಕೊಟ್ಟವರು: ಲ. ನಾ. ಭಟ್

ಪ್ರಸಂಗ ಪ್ರತಿ ಒದಗಣೆಗೆ ಸಹಕಾರ: ಲ. ನಾ. ಭಟ್

ಅಂತರಜಾಲ ಪ್ರತಿ ಬರವಣಿಗೆ: ವಿಧಾತ್ರಿ ಅಡಿಗ

ಅಂತರಜಾಲ ಪ್ರತಿ ವಿನ್ಯಾಸ: ವಿಂಧ್ಯಾಶ್ರೀ ಸೋಮಯಾಜಿ

ಅಂತರಜಾಲ ಪ್ರತಿ ತಿದ್ದುಪಡಿ: ಶ್ರೀಧರ ಡಿ.ಎಸ್., ಗಿಂಡೀಮನೆ ಮೃತ್ಯುಂಜಯ

ಅಂತರಜಾಲ ಪ್ರತಿ ಉತ್ಪಾದನೆ ಮತ್ತು ಪ್ರಕಾಶನ: ರವಿ ಮಡೋಡಿ, ನಟರಾಜ ಉಪಾಧ್ಯ, ಅಶ್ವಿನಿ ಹೊದಲ